# ರಾಷ್ಟ್ರದ ಪ್ರಗತಿಗೆ ವಚನ ಸಾಹಿತ್ಯದ ಮೌಲ್ಯಗಳು

**ವೆಂಕಟೇಶ ಬಿ. ಕುಲಕರ್ಣಿ**

ಕನ್ನಡ ಉಪನ್ಯಾಸಕರು, ಎಸ್. ಟಿ. ಸಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17297659

## ABSTRACT:

೧೨ನೇ ಶತಮಾನದ ವಚನ ಸಾಹಿತ್ಯವು ಧಾರ್ಮಿಕ, ಆಧ್ಯಾತ್ಮಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿವಿಧ ಅನುಭವಗಳನ್ನು ಪಡೆದುಕೊಂಡು, ಎಲ್ಲರಿಗಾಗಿ ಬದುಕಿ ಬಾಳಿದವರು ಶಿವಶರಣರು. ಇವರು ಕಾಯಕ, ದಾಸೋಹ ಹಾಗೂ ಧರ್ಮದ ತಿರುಳನ್ನು ಸಾರುವುದರ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಿತ್ತರಿಸುವುದರ ಮುಖೇನ ಸಮ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿ ಯಶಸ್ವಿಯಾದರು.

## KEYWORDS:

ವಚನ ಸಾಹಿತ್ಯ, ಕಾಯಕವೇ ಕೈಲಾಸ, ಅನುಭವ ಮಂಟಪ, ಪ್ರಜಾಪ್ರಭುತ್ವ ಮೌಲ್ಯಗಳು, ಸಾಮಾಜಿಕ ಸಮಾನತೆ.

**ಪ್ರವೇಶ:** ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಅನರ್ಘ್ಯ ರತ್ನ. ವಿಶ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯ ಕೊಟ್ಟ ಅತ್ಯಮೂಲ್ಯ ಕಾಣಿಕೆ ಈ ಶರಣ ಸಾಹಿತ್ಯ. ವಚನಕಾರರು ಪ್ರತಿಪಾದಿಸಿದ ತತ್ವ ಸಿದ್ಧಾಂತಗಳು ಸಾರ್ವಕಾಲಿಕವಾಗಿ ಸತ್ಯವಾಗಿದೆ. ಅಲ್ಲದೆ ಜ್ಞಾನ, ಕಲೆ, ಮತ್ತು ಮೌಲ್ಯಗಳ ಆಗರ. ವ್ಯಕ್ತಿ ಮತ್ತು ಸಮಾಜದ ಸರ್ವಾಂಗೀಣ ಪ್ರಗತಿಯನ್ನು ಜೀವಾಳವಾಗಿಸಿಕೊಂಡ ವಚನ ಸಾಹಿತ್ಯವು ವಿಶ್ವದ ಶ್ರೇಷ್ಠ ಸಾಹಿತ್ಯಗಳಲ್ಲಿ ಒಂದಾಗಿದೆ.

೧೨ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ನಿರ್ಮಿಸಿದ ಅನುಭವ ಮಂಟಪ ಜಗತ್ತಿನ ಪ್ರಪ್ರಥಮ ಧಾರ್ಮಿಕ ಸಂಸತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ವಚನ ಸಾಹಿತ್ಯದ ಮೌಲ್ಯಗಳು ಪ್ರಸ್ತುತ ರಾಷ್ಟ್ರದ ಬೆಳವಣಿಗೆಗೆ ಹಾಗೂ ಪ್ರಜಾಪ್ರಭುತ್ವದ ಯಶಸ್ವಿಗೆ ಮೂಲಸೂತ್ರವಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

ಬಸವಾದಿ ಶಿವಶರಣರು "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಸಂದೇಶ ಸಾರುವ ಸಾರ್ವತ್ರಿಕ ವಿಚಾರಧಾರೆಯ ಅಡಿಯಲ್ಲಿ ಕಲ್ಯಾಣದಲ್ಲಿ ನಿರ್ಮಾಣ ಮಾಡಿದ್ದ ಅನುಭವ ಮಂಟಪ ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಮೂಲ ತಳಹದಿಯಾಗಿದೆ. ಆದರೆ ೨೧ನೇ ಶತಮಾನದ ಭಾರತ ದೇಶದಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು ನಶಿಸುವ ಸಂದರ್ಭದಲ್ಲಿ ನಮಗೆ ವಚನಕಾರರ ವಚನಗಳು ಸಂಜೀವಿನಿಯಾಗಿದೆ.

### ೧) ಶ್ರಮಕ್ಕೆ ತಕ್ಕ ಗೌರವ :

ವಚನಕಾರರು ೧೨ನೇ ಶತಮಾನದಲ್ಲಿನ ಸನಾತನ ಧರ್ಮದಲ್ಲಿದ್ದ ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿ, ಕಾಯಕ ಸಿದ್ಧಾಂತವನ್ನು ಪ್ರತಿಪಾದಿಸಿದರು. ಶರಣ ಸಂಸ್ಕೃತಿಯು ದುಡಿದು ತಿನ್ನುವ ಸಂಸ್ಕೃತಿಯಾಗಿದೆ. ಎಲ್ಲ ಕೆಲಸ, ದುಡಿಮೆಗಳು ಕಾಯಕವಲ್ಲ. ಕಾಯಕವಾಗಬೇಕಾದರೆ, ಶರಣರು ಹೇಳಿದ ಕಾಯಕದ ಲಕ್ಷಣಗಳನ್ನು ಹೊಂದಿರಬೇಕು. ಅಂದರೆ, ಕಾಯಕ ಸತ್ಯ ಶುದ್ಧವಾಗಿರಬೇಕು ಎಂಬ ಮಾತನ್ನು ಉರಿಲಿಂಗಪೆದ್ದಿಯ ಪುಣ್ಯಸ್ತ್ರೀ

ಕಾಳವ್ವೆಯ ವಚನದಲ್ಲಿ ನೋಡಬಹುದು:

**“ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ,**
**ಸತ್ಯ ಶುದ್ಧ ವಿಲ್ಲದುದು ಕಾಯಕವಲ್ಲ**
**ಆಸೆಯೆಂಬುದು ಭವದ ಬೀಜ**
**ನಿರಾಸೆಯೆಂಬದು ನಿತ್ಯ ಮುಕ್ತಿ**
**ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ.”**

ಅಂದರೆ ಪ್ರತಿಯೊಬ್ಬ ಮನುಷ್ಯನು ಕಷ್ಟಪಟ್ಟು ಕಾಯಕ ಮಾಡಬೇಕು, ಆ ಕಾಯಕವು ಸತ್ಯ ಶುದ್ಧವಾಗಿರಬೇಕು ಎಂದು ವಿವರಿಸಿದ್ದಾಳೆ. ಕಾಯಕವೆಂದರೆ ಬರಿ ಕೆಲಸವಲ್ಲ, ಅದು ಶ್ರದ್ಧೆ, ಪ್ರಾಮಾಣಿಕತೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಶರಣರು ನೀಡಿದರು. ಈ ಹಿನ್ನೆಲೆಯಲ್ಲಿ ಮೋಳಿಗೆ ಮಾರಯ್ಯನ ವಚನ ನಿದರ್ಶನವಾಗಿದೆ:

**“ಕಾಯಕದಲ್ಲಿ ನಿರತನಾದರೆ**
**ಗುರು ದರುಶನವಾದರೂ ಮರೆಯಬೇಕು**
**ಲಿಂಗಪೂಜೆಯಾದರೂ ಮರೆಯಬೇಕು**
**ಜಂಗಮ ಮುಂದಿದ್ದರೂ ಹಂಗು ಹರಿಯಬೇಕು**
**ಕಾಯಕವೇ ಕೈಲಾಸವಾದ ಕಾರಣ**
**ಅಮರೇಶ್ವರ ಲಿಂಗ ವಾಯಿತ್ತಾದರೂ ಕಾಯಕದೊಳು.”**

ನಾವು ಕಾಯಕವನ್ನು ಮಾಡುವಾಗ ಏಕಾಗ್ರತೆಯಿರಬೇಕು. ನಮ್ಮ ಪಂಚೇಂದ್ರಿಯಗಳು ಮತ್ತು ಮನಸ್ಸು ಕಾಯಕದಲ್ಲಿ ಮಗ್ನವಾಗಿರಬೇಕು. ಗುರು, ಲಿಂಗ, ಜಂಗಮ ಬಂದರೂ ನಮ್ಮ ಕಾಯಕ ಕದಡಬಾರದು. ಶರಣರು “ಕಾಯಕವೇ ಕೈಲಾಸ”ವೆಂದು ಕಾಯಕದ ಮಹತ್ವವನ್ನು ತಿಳಿಸುತ್ತಾ ಕಾಯಕವನ್ನು ದೈವತ್ವಕ್ಕೇರಿಸಿದರು.

ಹೀಗೆ ಅನೇಕ ಶಿವಶರಣರ ಕಾಯಕ ಸಿದ್ಧಾಂತದ ವಚನಗಳನ್ನು ಒಳಹೊಕ್ಕು ಅವಲೋಕಿಸಿದರೆ, ಇಂದು ನಮ್ಮ ರಾಷ್ಟ್ರದ ಬೆಳವಣಿಗೆಗೆ ಎಲ್ಲರೂ ಒಂದಾಗಿ ಪ್ರಾಮಾಣಿಕತೆಯಿಂದ ಕಾಯಕ ಮಾಡುವ ಅನಿವಾರ್ಯತೆಯನ್ನು ನಾವು ತಿಳಿದುಕೊಳ್ಳಬೇಕು. ಆದರೆ, ಇಂದು ನಮ್ಮ ದೇಶದ ವಿದ್ಯಾವಂತ ಸಮುದಾಯವು ಕಾಯಕದಲ್ಲಿ ಮೇಲು–ಕೀಳು ಎನ್ನುವ ಮನೋಭಾವನೆಯನ್ನು ನಾವು ಕಾಣುತ್ತೇವೆ. ದುಡಿಯದೆ, ಕಷ್ಟ ಪಡದೆ ಹಣ ಗಳಿಸಬೇಕೆನ್ನುವ ಸ್ವಾರ್ಥ ಮನೋಭಾವ ತುಂಬಿದ ಇಂದಿನ ಯುವ ಸಮುದಾಯದ ಸೋಂಬೇರಿಗಳಿಗೆ ಬಸವಾದಿ ಶಿವಶರಣರ ಕಾಯಕದ ವಚನಗಳು ದಿವ್ಯ ಔಷಧವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

**೨) ಸಾಮಾಜಿಕ ಸಮಾನತೆ :**

೧೨ನೇ ಶತಮಾನದಲ್ಲಿ ಜಾತಿ, ವರ್ಣ, ವರ್ಗ, ಮತ್ತು ಲಿಂಗ ತಾರತಮ್ಯಗಳು ತಾಂಡವವಾಡುತ್ತಿದ್ದವು. ಸಾಮಾನ್ಯ ಜನರಿಗೆ ಸ್ವತಂತ್ರವಾಗಿ ಓಡಾಡುವ ಹಕ್ಕಿರಲಿಲ್ಲ. ದೇವಾಲಯ ಪ್ರವೇಶವಂತೂ ಬಲುದೂರ. ಇಂತಹ ಅನಿಷ್ಟ ಆಚರಣೆಗಳನ್ನು ಕಂಡ ಬಸವಾದಿ ಶಿವಶರಣರು ಜಾತಿ, ವರ್ಣ, ವರ್ಗಗಳನ್ನು ತೊಡೆದುಹಾಕಿ ಸಾಮಾಜಿಕ ಸಮಾನತೆಯ ತಳಹದಿಯ ಮೇಲೆ ಸಮಾಜವನ್ನು ಕಟ್ಟಲು “ಅನುಭವ ಮಂಟಪ”ವನ್ನು ಸ್ಥಾಪಿಸಿದರು. ದೇಶದ ನಾನಾ ಕಡೆಗಳಿಂದ ಶಿವಶರಣರು ಕಲ್ಯಾಣಕ್ಕೆ ಬಂದು ಸಾಮಾಜಿಕ ಕ್ರಾಂತಿಯಲ್ಲಿ ಪಾಲ್ಗೊಂಡರು.

ಸರ್ವ ಸಮಾನತೆಯನ್ನು ಪ್ರತಿಪಾದಿಸಲು ಬಸವಣ್ಣನವರು “ಇಷ್ಟಲಿಂಗ”ವನ್ನು ಸರ್ವರಿಗೂ ನೀಡಿದರು. ಈ ಇಷ್ಟಲಿಂಗ ಜಾತಿಯ ಸಂಕೇತವಲ್ಲ. ಅದು ದೇವರಲ್ಲ. ಅದು

ಜಾತಿ ಕಳೆದುಕೊಂಡವರ ಸಂಕೇತ. ಏಕದೇವೋಪಾಸನೆಯ ಸಂಕೇತ. ಮೇಲಾಗಿ ಸಮಾನತೆಯ ಹೆಗ್ಗುರುತು.

**"ಅಪ್ಪನು ನಮ್ಮ ಮಾದಾರ ಚೆನ್ನಯ್ಯ**
**ಬೊಪ್ಪನು ನಮ್ಮ ಡೋಹರ ಕಕ್ಕಯ್ಯ**
**ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ**
**ಎನ್ನನೇತಕ್ಕರಿಯಿರಿ, ಕೂಡಲಸಂಗಮದೇವ".**

ಬಸವಣ್ಣನವರು ಸರ್ವಜಾತಿ ಮತಗಳ ಜನರನ್ನು ಅಪ್ಪ, ಅಜ್ಜ, ಮುತ್ತಜ್ಜ, ಅಯ್ಯ ಹಾಗೂ ಅಣ್ಣ ಎಂಬ ರಕ್ತ ಸಂಬಂಧಗಳಿಗೆ ಭಕ್ತಿ ಸಂಬಂಧದ ಅರ್ಥ ನೀಡಿ ಸಕಲ ಮಾನವ ಕುಲವನ್ನೇ "ಮಹಾಮನೆಯ" ಪರಿಕಲ್ಪನೆಯಲ್ಲಿ ಕಂಡರು.

**"ಕೊಲುವವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ**
**ಕುಲವೇನೊ ಅವಂದಿರ ಕೊಲವೇನೊ ಸಕಲ ಜೀವಾತ್ಮರಿಗೆ**
**ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು."**

ಈ ವಚನದಲ್ಲಿ ಬಸವಣ್ಣನವರು ಜಾತಿ ತಾರತಮ್ಯತೆಯ ವಿರುದ್ಧ ಧ್ವನಿ ಎತ್ತಿರುವುದನ್ನು ನಾವು ಕಾಣಬಹುದು. ಮನುಷ್ಯ ಮಾಡುವ ಕರ್ಮಗಳಿಂದ ಜಾತಿಗಳು ನಿರ್ಧಾರವಾಗುವುದಿಲ್ಲ. ಯಾರು ಸಕಲ ಜೀವ ರಾಶಿಯ ಸಂಕುಲಕ್ಕೆ ಒಳಿತನ್ನು ಬಯಸುವರೊ ಅವರೇ ನಿಜವಾದ ಶ್ರೇಷ್ಠರು ಎಂದು ವಿವರಿಸಿದ್ದಾರೆ.

**ಲಿಂಗ ಸಮಾನತೆ :**

ಸ್ತ್ರೀ–ಪುರುಷರ ದೈಹಿಕ ಭಿನ್ನತೆಗಳನ್ನು ಮುಂದಿಟ್ಟುಕೊಂಡು ಆಚರಿಸುವ ಲಿಂಗ ತಾರತಮ್ಯ ನೀತಿಯನ್ನು ಶಿವಶರಣರು ಖಂಡಿಸಿ "ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬ ಸಂದೇಶವನ್ನು ಸಾರಿದರು. ಅಲ್ಲದೆ "ಹೆಣ್ಣು, ಹೊನ್ನು, ಮಣ್ಣು ಮನುಷ್ಯನಿಗೆ ಮಾಯೆಯಾಗಿ ಪರಿಣಮಿಸಿಲ್ಲ. ಮನದ ಮುಂದಿನ ಆಸೆಯೇ ಮಾಯೆ" ಎಂಬ ಪ್ರಭುದೇವರ ವಚನ ಅಕ್ಷರಶಃ ಸತ್ಯ.

**"ಮೊಲೆ ಮೂಡಿ ಬಂದಡೆ ಹೆಣ್ಣಂಬರು**
**ಮೀಸೆ ಕಾಸೆ ಬಂದಡೆ ಗಂಡಂಬರು**
**ನಡುವೆ ಸುಳಿವ ಆತ್ಮನು**
**ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ".**

ಆತ್ಮ ತತ್ವದಲ್ಲಿ ನೋಡಿದರೆ ಸ್ತ್ರೀ ಪುರುಷರಲ್ಲಿ ಭೇದವಿಲ್ಲ ಎಂದು ಜೇಡರ ದಾಸಿಮಯ್ಯನವರು ಲಿಂಗ ತಾರತಮ್ಯವನ್ನು ತಿರಸ್ಕರಿಸುತ್ತಾರೆ.

**"ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು**
**ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು**
**ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು**
**ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು**
**ಅದು ಕಾರಣ, ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ,**
**ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ."**

ಈ ವಚನದಲ್ಲಿ ಸಮಾನತೆಯನ್ನು ಪ್ರತಿಪಾದಿಸುವುದಲ್ಲದೆ, ತ್ರಿಮೂರ್ತಿ ದೇವತೆಗಳು ಹೆಣ್ಣಿಗೆ ಆದಿಶಕ್ತಿಯ ಸ್ಥಾನಮಾನವನ್ನು ಕೊಟ್ಟು. ಅವಳನ್ನು ಸಾಕ್ಷಾತ್ ಭಗವಂತನ ಸ್ವರೂಪಿ ಎಂದು ಕರೆದಿರುವುದು ವಿಶೇಷ.

ಹೀಗೆ ವಚನಕಾರರು ಪ್ರಜಾಪ್ರಭುತ್ವದ ಪ್ರಮುಖ ಆಶಯವಾದ ಲಿಂಗ ಸಮಾನತೆಯನ್ನು ೮೦೦ ವರ್ಷಗಳ ಹಿಂದೆಯೇ ಪ್ರತಿಪಾದಿಸಿದರು. ಆದರೆ ಇಂದಿನ ಸಂದರ್ಭದಲ್ಲಿ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದ ಪಾಂಡಿತ್ಯವನ್ನು ಪಡೆದ ವಿದ್ಯಾವಂತರ ಸಮುದಾಯ ಲೈಂಗಿಕ ದಬ್ಬಾಳಿಕೆ, ಸ್ತ್ರೀ ಶೋಷಣೆ, ಹಾಗೂ ಮಹಿಳಾ ದೌರ್ಜನ್ಯವನ್ನು ಎಸಗುವುದನ್ನು ನೋಡಿದರೆ, ನಾವು ಭವ್ಯ ಭಾರತದ ಭವಿಷ್ಯತ್ತಿನ ಪ್ರಜಾಪ್ರಭುತ್ವವನ್ನು ಮುನ್ನಡೆಸುವ ಪ್ರಜೆಗಳೇ ಎಂದು ಅನುಮಾನವಾಗುತ್ತದೆ. ಆದ್ದರಿಂದ ಶರಣರ ವಚನಗಳಿಂದ ನಾವು ಸ್ತ್ರೀ ಸಮಾನತೆ ಎಂಬ ಪ್ರಜಾಪ್ರಭುತ್ವ ಮೌಲ್ಯವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

**೩) ಅನುಭವ ಮಂಟಪ :**

೧೨ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಕರ್ನಾಟಕದ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿದೆ. ಇದು ವಿಶ್ವದ ಮೊದಲ ಧಾರ್ಮಿಕ ಸಂಸತ್ತು. ಈ ಅನುಭವ ಮಂಟಪದಲ್ಲಿ ಸರ್ವರಿಗೂ ಮುಕ್ತ ಪ್ರವೇಶ ಮತ್ತು ಅವಕಾಶವನ್ನು ಕೊಡುವುದಲ್ಲದೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಮನೆ ಕೆಲಸಕ್ಕೆ ಸೀಮಿತಗೊಂಡಿದ್ದ ಸ್ತ್ರೀಯರು ಅನುಭವ ಮಂಟಪಕ್ಕೆ ಬಂದು ವಚನಗಳನ್ನು ರಚಿಸುವಷ್ಟು ಬೆಳೆಯಲಿಕ್ಕೆ ಕಾರಣವಾದುದು ಈ ಅನುಭವ ಮಂಟಪ. ಇದರ ಕೀರ್ತಿವಾರ್ತೆ ಕೇಳಿ ದೇಶದ ನಾನಾ ಕಡೆಗಳಿಂದ ಕಾಶ್ಮೀರದ ಮೋಳಿಗೆ ಮಾರಯ್ಯ, ಆಫ್ಘಾನಿಸ್ತಾನದ ಮರುಳ ಶಂಕರ ದೇವ, ಆಂಧ್ರದ ಕಿನ್ನರ ಬೊಮ್ಮಯ್ಯ ಹೀಗೆ ಅನೇಕ ಶಿವಶರಣರು ಕಲ್ಯಾಣಕ್ಕೆ ಬಂದಿದ್ದರು. ಒಂದು ಲಕ್ಷ ತೊಂಬತ್ತಾರು ಸಾವಿರ (೧,೯೬,೦೦೦) ಅನುಭವಿಗಳು ಒಂದು ಕಡೆ ನೆಲೆ ನಿಂತಿದ್ದು ಚಾರಿತ್ರಿಕ ದಾಖಲೆ. ೧೨ನೇ ಶತಮಾನದ ಅನೇಕ ತಾರತಮ್ಯತೆಗಳನ್ನು ಹೋಗಲಾಡಿಸಿ, ಅಂತರ್ಜಾತಿ ವಿವಾಹವನ್ನು ಯಶಸ್ವಿಗೊಳಿಸಿ ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಯ ಕ್ರಾಂತಿಯನ್ನು ವೈಚಾರಿಕ ತಳಹದಿಯ ಮೇಲೆ ಯಶಸ್ವಿಗೊಳಿಸಿದರು. ವ್ಯಷ್ಟಿ ಸಮಷ್ಟಿ ಕಲ್ಯಾಣವನ್ನು ಬಯಸಿದವರು ಶಿವಶರಣರು. ವಿಶ್ವಸಂಸ್ಥೆಯ ಮಾನವ ಹಕ್ಕುಗಳಿಗೆ ಹಾಗೂ ಭಾರತ ಸಂವಿಧಾನದಲ್ಲಿ ಉಕ್ತವಾದ ಸಮಾಜವಾದ, ಸಮತಾವಾದ ಹಾಗೂ ಜಾತ್ಯತೀತವಾದ ತತ್ವಗಳನ್ನು ೮೦೦ ವರ್ಷಗಳ ಹಿಂದೆಯೇ ಶರಣರ "ವಚನ ಸಂವಿಧಾನವು" ಅಂದಿನ ಕಾಲದಲ್ಲಿ ಜಾರಿಗೆ ತಂದಿರುವುದು ಗಮನಾರ್ಹ ಸಂಗತಿ.

**೪) ಮಾನವೀಯತೆ ಮತ್ತು ಸಾಮರಸ್ಯ :**

ಭಾರತ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಸತ್ಯ, ಅಹಿಂಸೆ, ತ್ಯಾಗ, ಪ್ರೀತಿ, ನಿಸ್ವಾರ್ಥತೆ ಮತ್ತು ಸಾಮರಸ್ಯದ ಜೀವನವು ಮೌಲ್ಯಗಳಾಗಿವೆ. ವಿಭಿನ್ನ ಸಂಸ್ಕೃತಿ, ಆಚರಣೆ, ರೂಢಿ, ಸಂಪ್ರದಾಯಗಳ ತಾಣವಾದ ಭಾರತ ದೇಶದಲ್ಲಿ "ನಾವು ಭಾರತೀಯರು" ಎಂಬ ಐಕ್ಯತೆಯ ಮನೋಭಾವನೆಯನ್ನು ಬೆಳೆಸಬೇಕು. ಮಹಾತ್ಮ ಗಾಂಧೀಜಿಯವರ "ರಾಮ ರಾಜ್ಯದ" ಕನಸು ನನಸಾಗಬೇಕಾದರೆ, ಭಾರತೀಯರು ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಮಾನವೀಯ ಮೌಲ್ಯ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಈ ದಿಸೆಯಲ್ಲಿ ನಮ್ಮ ಬಸವಾದಿ ಶಿವಶರಣರು ೧೨ನೇ ಶತಮಾನದಲ್ಲಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸುವುದಕ್ಕಿಂತ ಪೂರ್ವದಲ್ಲಿಯೇ ಅಂದರೆ ೮೦೦ ವರ್ಷಗಳ ಹಿಂದೆಯೇ ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜಕ್ಕೆ ಉಣಬಡಿಸಿದರು.

**"ದಯವಿಲ್ಲದ ಧರ್ಮವಾವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ"**

"ದಯವೇ ಧರ್ಮದ ಮೂಲವಯ್ಯ" ಎಂದು ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದವರು ಬಸವಣ್ಣನವರು.

**"ಕಳಬೇಡ, ಕೊಲಬೇಡ,
ಹುಸಿಯ ನುಡಿಯಲು ಬೇಡ.
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ
ನಮ್ಮ ಕೂಡಲಸಂಗಮದೇವರನೊಲಿಸುವ ಪರಿ"**

ಎಂಬ ವಚನದ ಮೂಲಕ ಸಪ್ತ ಮಹಾಪಾತಕಗಳ ದುಷ್ಪರಿಣಾಮಗಳನ್ನು ಹೇಳುವುದರ ಮೂಲಕ ಸತ್ಯ, ಆಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಹಾಗೂ ತ್ಯಾಗ ಮೊದಲಾದ ಮಾನವೀಯ ಮೌಲ್ಯಗಳನ್ನು ಬಿಂಬಿಸಿದರು. ಅದರ ಜೊತೆಗೆ ಮನುಷ್ಯ-ಮನುಷ್ಯರ ನಡುವೆ ಸಹಬಾಳ್ವೆ ಮತ್ತು ಸಾಮರಸ್ಯತೆಯನ್ನು ಮೂಡಿಸುವುದು ವಚನಕಾರರ ಉದ್ದೇಶವಾಗಿತ್ತು. ಅದಕ್ಕಾಗಿ ಶರಣರು ದಾಸೋಹ ಸಂಸ್ಕೃತಿಯನ್ನು ಪ್ರತಿಪಾದಿಸಿದರು.

**"ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು
ಕೋಳಿ ಒಂದು ಕುಟುಕ ಕಂಡಡೆ ಕೋಗಿ ಕರೆಯದೆ ತನ್ನ ಕುಲನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಗಿಂತ
ಕರಕಷ್ಟ ಕೂಡಲಸಂಗಮದೇವಾ."**

ಬಸವಣ್ಣನವರು ಇಲ್ಲಿ ಕಾಗೆ ಮತ್ತು ಕೋಳಿಗಳನ್ನು ದೃಷ್ಟಾಂತವಾಗಿ ಹೇಳುವುದರ ಮೂಲಕ ಅವುಗಳಲ್ಲಿನ ಸಾಮರಸ್ಯತೆ ಮತ್ತು ಸಹಜೀವನದ ಮೌಲ್ಯಗಳು ಮಾನವರಲ್ಲಿ ಬೆಳೆದು ಬರಬೇಕೆಂದು ಹೇಳುತ್ತಾರೆ. ಕಾಗೆ ಮತ್ತು ಕೋಳಿಯನ್ನು "ದಾಸೋಹ ಪಕ್ಷಿ" ಎಂದು ಕರೆದಿರುವುದು ತುಂಬಾ ಸ್ವಾರಸ್ಯಕರವಾಗಿದೆ.

**"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರಣ್ಣ
ಸತ್ಯವ ನುಡಿವುದೇ ದೇವ ಲೋಕ !
ಮಿಥ್ಯವ ನುಡಿವುದೇ ಮರ್ತ್ಯಲೋಕ !
ಆಚಾರವೇ ಸ್ವರ್ಗ ! ಅನಾಚಾರವೇ ನರಕ !
ನೀವೇ ಪ್ರಮಾಣ ಕೂಡಲಸಂಗಮದೇವ."**

ಸನಾತನ ಧರ್ಮದ ಸ್ವರ್ಗ ನರಕಗಳ ಕಲ್ಪನೆಗಳನ್ನು ಅಲ್ಲಗಳೆದು, ಸತ್ಯವಂತನಾಗಿ ಬದುಕುವುದೇ ದೇವಲೋಕ. ಸುಳ್ಳು, ಮೋಸ ವಂಚನೆಯನ್ನು ಮಾಡಿ ಬದುಕುವುದೇ ಮಾನವ ಲೋಕವೆಂದು ವಿಶ್ವಕ್ಕೆ ಸಂದೇಶವನ್ನು ಸಾರಿದರು.

**ಸಮಾರೋಪ :** ಒಟ್ಟಾರೆಯಾಗಿ ವಚನಕಾರರು ತಮ್ಮ ಬದುಕಿನ ಸ್ವಯಾನುಭವಗಳನ್ನೇ ಸಾಹಿತ್ಯದ ಆಕರವನ್ನಾಗಿಸಿಕೊಂಡು ಕಾಯಕ, ದಾಸೋಹ, ಸಮ ಸಮಾಜ ರಚನೆ, ಲಿಂಗಸಮಾನತೆ, ಮತ್ತು ಸಾಮರಸ್ಯತೆ ಮೊದಲಾದ ಪ್ರಜಾಪ್ರಭುತ್ವ ಮೌಲ್ಯಗಳನ್ನು ೧೨ನೇ ಶತಮಾನದಲ್ಲಿ ಪ್ರತಿಪಾದಿಸುವುದಲ್ಲದೆ ಅವುಗಳನ್ನು ಆಚರಣೆಯಲ್ಲಿ ತಂದಿರುವುದು ವಿಸ್ಮಯಕಾರಿ ಸಂಗತಿ. ಆದ್ದರಿಂದ ವಚನ ಸಾಹಿತ್ಯವು ೧೨ನೇ ಶತಮಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಇಂದಿನ ೨೧ನೇ ಶತಮಾನದ ಸಮಾಜಕ್ಕೂ ಪ್ರಸ್ತುತವಾಗಿದೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಚನ ಸಾಹಿತ್ಯದ ತತ್ವಗಳು ಆದರ್ಶ ಪ್ರಾಯವಾಗಿವೆ.

## ಆಧಾರ ಗ್ರಂಥಗಳು:


1. ಕಡ್ಡಿ ಬಸವರಾಜ., ಶರಣ ಸಂಸ್ಕೃತಿ
2. ಶ್ರೀ ಶಾಸ್ತ್ರಿ ಜಿ. ವಿ., ಜಗಜ್ಯೋತಿ ಬಸವಣ್ಣನವರು
3. ಮುಗಳಿ ರಂ. ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ., ವಚನ ಸಾಹಿತ್ಯ



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.